**All India Radio: Bangalore**
**National Bulletin In Kannada**
**14.06.2026 19.35 hrs**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

---

ಮುಖ್ಯಾಂಶಗಳು

೧. ಭಾರತ್ ಇನ್ನೋವೇಟ್ಸ್ ವೇದಿಕೆಯು ದೇಶದ ಪ್ರತಿಭೆ ಮತ್ತು ಯುರೋಪಿಯನ್ ಬಂಡವಾಳದ ನಡುವಿನ ಸೇತುವೆ: ಪ್ರಧಾನಮಂತ್ರಿ ನರೇಂದ್ರ ಮೋದಿ

೨. ಭಾರತದ ಬಾಹ್ಯಾಕಾಶ ಆರ್ಥಿಕತೆ ಮುಂದಿನ ದಶಕದಲ್ಲಿ ೪೦ ರಿಂದ ೪೫ ಶತಕೋಟಿ ಡಾಲರ್ ತಲುಪುವ ನಿರೀಕ್ಷೆ - ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್

೩. ಕರ್ನಾಟಕ ಗ್ಯಾರಂಟಿ ಯೋಜನೆಗಳಲ್ಲಿ ಅನರ್ಹರ ಪತ್ತೆಗೆ ಕ್ರಮ, ಯೋಜನೆ ಮುಂದುವರಿಕೆ - ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

೪. ಟರ್ಕಿಯಲ್ಲಿ ನಡೆದ ಬಿಲ್ಲುಗಾರಿಕೆ ವಿಶ್ವಕಪ್ ಹಂತ-೩ ಸ್ಪರ್ಧೆ- ರಿಕರ್ವ್ ಮಿಶ್ರ ತಂಡ ವಿಭಾಗದಲ್ಲಿ ಭಾರತದ ಧೀರಜ್ ಬೊಮ್ಮದೇವರ ಮತ್ತು ಕುಮ್‌ಕುಮ್ ಮೊಹೋದ್‌ಗೆ ಸ್ವರ್ಣ ಪದಕ

---

ಫ್ರಾನ್ಸ್‌ನ ನೀಸ್‌ನಲ್ಲಿರುವ ಪಲೇ ದೆ ಎಕ್ಸ್‌ಪೋಸಿಷನ್ಸ್‌ನಲ್ಲಿ ಇಂದು ನಡೆದ ಭಾರತ್ ಇನ್ನೋವೇಟ್ಸ್ ಕಾರ್ಯಕ್ರಮವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಜಂಟಿಯಾಗಿ ಉದ್ಘಾಟಿಸಿದರು.

ಭಾರತ-ಫ್ರಾನ್ಸ್ ನವೋದ್ಯಮ ವರ್ಷದ ಭಾಗವಾಗಿ ನಡೆಯುತ್ತಿರುವ ಈ ಕಾರ್ಯಕ್ರಮವು ಭಾರತ, ಫ್ರಾನ್ಸ್ ಹಾಗೂ ಇತರ ದೇಶಗಳ ಪ್ರಮುಖ ಸ್ಟಾರ್ಟ್‌ಅಪ್‌ಗಳನ್ನು ಒಂದುಗೂಡಿಸಿದ್ದು, ವೆಂಚರ್ ಕ್ಯಾಪಿಟಲ್ ನಿಧಿಗಳ ಕ್ರೋಢೀಕರಣಕ್ಕೂ ವೇದಿಕೆಯಾಗಿದೆ. ಸುಧಾರಿತ ಕಂಪ್ಯೂಟಿಂಗ್, ಅರೆವಾಹಕಗಳು, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ತಂತ್ರಜ್ಞಾನ, ಬಾಹ್ಯಾಕಾಶ ತಂತ್ರಜ್ಞಾನ, ಶುದ್ಧ ಇಂಧನ, ಜೈವಿಕ ತಂತ್ರಜ್ಞಾನ ಸೇರಿದಂತೆ ೧೩ ಪ್ರಮುಖ ಕ್ಷೇತ್ರಗಳ ನವೀನ ಆವಿಷ್ಕಾರಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಮಂತ್ರಿ ಮೋದಿ, ಭಾರತದ ಪ್ರತಿಭೆ ಮತ್ತು ಯುರೋಪಿಯನ್ ಬಂಡವಾಳದ ನಡುವಿನ ಸೇತುವೆಯಾಗಿ ಭಾರತ್ ಇನ್ನೋವೇಟ್ಸ್ ಹೊರಹೊಮ್ಮುತ್ತಿದ್ದು, ಯುವಸಮೂಹವು ಜಾಗತಿಕ ಪರಿಣತಿಯೊಂದಿಗೆ ಸಂಪರ್ಕ ಸಾಧಿಸಲು ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ ಎಂದು ಭಾರತದ ಸ್ಟಾರ್ಟ್‌ಅಪ್ ಕ್ರಾಂತಿಯ ಬಗ್ಗೆ ವಿವರಿಸಿದರು.

ಭಾರತ-ಫ್ರಾನ್ಸ್ ಬಾಂಧವ್ಯದ ಶಕ್ತಿಯನ್ನು ಪ್ರಸ್ತಾಪಿಸುತ್ತಾ, ಅನೇಕ ರಾಷ್ಟ್ರಗಳು ವ್ಯಾಪಾರ ಮತ್ತು ಕಾರ್ಯತಂತ್ರದ ಸಹಕಾರದಲ್ಲಿ ತೊಡಗಿದ್ದರೂ, ಕೆಲವೇ ಕೆಲವು ರಾಷ್ಟ್ರಗಳ ಸಂಬಂಧಗಳು ಹಂಚಿಕೆ ಮಾಡಿಕೊಂಡಂತಹ ದೃಷ್ಟಿಕೋನ ಮತ್ತು ಸಾಮಾನ್ಯ ಹಿತಾಸಕ್ತಿಗಳಿಂದ ಕೂಡಿವೆ ಎಂದು ತಿಳಿಸಿದರು.

ಭಾರತ-ಫ್ರಾನ್ಸ್ ಸಹಭಾಗಿತ್ವವು ಪರಸ್ಪರ ವಿಶ್ವಾಸ, ಹಂಚಿಕೊಂಡಿರುವ ಮೌಲ್ಯಗಳು ಹಾಗೂ ಭವಿಷ್ಯದ ಕುರಿತ ಸಮಾನ ದೃಷ್ಟಿಕೋನದ ಮೇಲೆ ನಿರ್ಮಾಣಗೊಂಡ ದೀರ್ಘಕಾಲೀನ ಬಾಂಧವ್ಯವಾಗಿದೆ. ನವೋದ್ಯಮ, ತಂತ್ರಜ್ಞಾನ ಮತ್ತು ಭಾರತದ ಯುವಜನತೆಯ ಆಶಯಗಳು ದೇಶದ ಪರಿವರ್ತನೆಗೆ ಚಾಲನೆ ನೀಡುತ್ತಾ ಭವಿಷ್ಯವನ್ನು ರೂಪಿಸುತ್ತಿವೆ ಎಂದು ಪ್ರಧಾನಮಂತ್ರಿ ಪ್ರತಿಪಾದಿಸಿದ್ದಾರೆ.

ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರನ್ ಮಾತನಾಡಿ, ವಿಶ್ವವು ಭಾರತವನ್ನು ಅಪಾರ ಪ್ರತಿಭೆಯ ದೇಶವಾಗಿ ಮಾತ್ರವಲ್ಲದೆ, ತಂತ್ರಜ್ಞಾನ ವಲಯದಲ್ಲಿ ಪರಿವರ್ತಕ ಶಕ್ತಿಯ ರಾಷ್ಟ್ರವಾಗಿಯೂ ನೋಡುತ್ತಿದೆ ಎಂದು ಹೇಳಿದರು.

ಮುಂಬೈನಲ್ಲಿ ಚಾಲನೆ ನೀಡಲಾದ ಭಾರತ-ಫ್ರಾನ್ಸ್ ನವೋದ್ಯಮ ವರ್ಷವನ್ನು ಉಲ್ಲೇಖಿಸಿದ ಅವರು, ಭಾರತದ ಪ್ರಮುಖ ಸ್ಟಾರ್ಟ್‌ಅಪ್‌ಗಳು ಮತ್ತು ನವೋದ್ಯಮಿಗಳನ್ನು ಪರಿಚಯಿಸುವ ಪಾಲುದಾರ ರಾಷ್ಟ್ರವಾಗಿ ಆಯ್ಕೆಯಾಗಿರುವುದಕ್ಕೆ ಫ್ರಾನ್ಸ್ ಹೆಮ್ಮೆಪಡುತ್ತದೆ ಎಂದು ಹೇಳಿದರು.

ಸ್ವಾತಂತ್ರ್ಯಾನಂತರ ಭಾರತದ ಅತಿ ದೀರ್ಘಾವಧಿಯ ಚುನಾಯಿತ ಪ್ರಧಾನಮಂತ್ರಿಯಾಗಿರುವ ನರೇಂದ್ರ ಮೋದಿ ಅವರಿಗೆ ಅಭಿನಂದನೆ ಸಲ್ಲಿಸಿದರು.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಮಾತನಾಡಿ, ಜಾಗತಿಕ ಭೂರಾಜಕೀಯ ಮತ್ತು ತಂತ್ರಜ್ಞಾನ ಪರಿವರ್ತನೆಯ ಕಾಲಘಟ್ಟದಲ್ಲಿ ಭಾರತವು ವಿಶ್ವಾಸಾರ್ಹ ಪಾಲುದಾರ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದು ಹೇಳಿದರು.

ದೇಶದಲ್ಲಿ ೨.೩ ಲಕ್ಷಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳಿದ್ದು, ಕಾರ್ಯಕ್ರಮದಲ್ಲಿ ಭಾಗವಹಿಸಿರುವ ೧೨೦ ನವೋದ್ಯಮಿಗಳು ಒಟ್ಟು ನವೋದ್ಯಮಗಳ ಒಂದು ಭಾಗವನ್ನು ಮಾತ್ರ ಪ್ರತಿನಿಧಿಸಿವೆ ಎಂದು ಭಾರತದ ಸಾಮರ್ಥ್ಯದ ಬಗ್ಗೆ ತಿಳಿಸುತ್ತಾ, ಫ್ರಾನ್ಸ್ ಉದ್ಯಮ ವಲಯವು ಭಾರತದಲ್ಲಿ ಹೂಡಿಕೆ, ವಿನ್ಯಾಸ, ನವೋದ್ಯಮ ಹಾಗೂ ಉತ್ಪಾದನೆಯಲ್ಲಿ ಹೆಚ್ಚು ತೊಡಗಿಕೊಳ್ಳುವಂತೆ ಗೋಯಲ್ ಆಹ್ವಾನಿಸಿದರು.

ಈ ಕಾರ್ಯಕ್ರಮದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್, ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಪ್ರಧಾನ ವೈಜ್ಞಾನಿಕ ಸಲಹೆಗಾರ ಅಜಯ್ ಕುಮಾರ್ ಸೂದ್, ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ ಸೇರಿದಂತೆ ಹಲವು ಉದ್ಯಮ ನಾಯಕರು ಉಪಸ್ಥಿತರಿದ್ದರು.

---

ಫ್ರಾನ್ಸ್‌ನ ನೀಸ್‌ನಲ್ಲಿರುವ ಐತಿಹಾಸಿಕ ವಿಲ್ಲಾ ಕೆರಿಲೋಸ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ನಡುವೆ ನಿಯೋಗ ಮಟ್ಟದ ಮಾತುಕತೆ ಪ್ರಗತಿಯಲ್ಲಿದೆ.

ಉಭಯ ದೇಶಗಳ ನಡುವಿನ ವಿಶೇಷ ಜಾಗತಿಕ ಕಾರ್ಯತಂತ್ರದ ಸಹಭಾಗಿತ್ವವನ್ನು ರಕ್ಷಣೆ, ತಂತ್ರಜ್ಞಾನ ಮತ್ತು ವ್ಯಾಪಾರ ವಲಯಗಳಲ್ಲಿ ವಿಸ್ತರಿಸುವ ಬಗ್ಗೆ ಪ್ರಮುಖವಾಗಿ ಚರ್ಚಿಸಲಾಗುತ್ತಿದೆ.

---

ಭಾರತದ ಬಾಹ್ಯಾಕಾಶ ಆರ್ಥಿಕತೆಯು ಪ್ರಸ್ತುತ ೮ ರಿಂದ ೯ ಶತಕೋಟಿ ಡಾಲರ್‌ಗಳಷ್ಟಿದ್ದು ಮುಂದಿನ ದಶಕದಲ್ಲಿ ಸುಮಾರು ೪೦ ರಿಂದ ೪೫ ಶತಕೋಟಿ ಡಾಲರ್‌ಗಳಿಗೆ ವೃದ್ಧಿಸುವ ನಿರೀಕ್ಷೆಯಿದೆ ಎಂದು ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ.

ನವದೆಹಲಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಚಿವರು, ನೀತಿ ನಿರೂಪಣೆಯಲ್ಲಿನ ಸುಧಾರಣೆಗಳು, ಬೆಳೆಯುತ್ತಿರುವ ಖಾಸಗಿ ಪಾಲುದಾರಿಕೆ ಮತ್ತು ವೇಗವಾಗಿ ವಿಸ್ತರಿಸುತ್ತಿರುವ ನಾವೀನ್ಯತೆ ಪರಿಸರ ವ್ಯವಸ್ಥೆಯಿಂದಾಗಿ ಈ ಪ್ರಗತಿ ಸಾಧ್ಯವಾಗಲಿದೆ ಎಂದು ಹೇಳಿದ್ದಾರೆ.

ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಯು ದೇಶಾದ್ಯಂತ ಸಂಭವಿಸುತ್ತಿರುವ ದೊಡ್ಡ ಪರಿವರ್ತನೆಯ ಪ್ರತಿಬಿಂಬವಾಗಿದೆ. ಇಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಕೇವಲ ಪ್ರಯೋಗಾಲಯಗಳಿಗಷ್ಟೇ ಸೀಮಿತವಾಗದೆ, ದೇಶದ ಪ್ರಜ್ಞೆಯ ಭಾಗವಾಗಿ ಮಾರ್ಪಟ್ಟಿವೆ ಎಂದು ಡಾ. ಸಿಂಗ್ ವಿವರಿಸಿದ್ದಾರೆ.

ವಿಜ್ಞಾನ ಮತ್ತು ಸಮಾಜದ ನಡುವೆ ಬೆಳೆಯುತ್ತಿರುವ ಸಂಪರ್ಕ ಇತ್ತೀಚಿನ ವರ್ಷಗಳ ಅತ್ಯಂತ ಮಹತ್ವದ ಸಾಧನೆಗಳಲ್ಲಿ ಒಂದಾಗಿದೆ ಎಂದು ಹೇಳಿರುವ ಅವರು, ಸಾರ್ವಜನಿಕ ಚರ್ಚೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಿಗುತ್ತಿರುವ ಅಭೂತಪೂರ್ವ ಪ್ರಾಮುಖ್ಯತೆಯು ವಿಜ್ಞಾನ ಆಧಾರಿತ ಉಪಕ್ರಮಗಳನ್ನು ನಿರಂತರವಾಗಿ ದೇಶದ ಮುಖ್ಯವಾಹಿನಿಗೆ ತರುತ್ತಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ ಎಂದಿದ್ದಾರೆ.

---

ಕರ್ನಾಟಕ ಸರ್ಕಾರದ ಗೃಹಲಕ್ಷ್ಮಿ ಹಾಗೂ ಗೃಹ ಜ್ಯೋತಿ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ. ಈ ಬಗೆಗಿನ ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಗಳೂರಿನಲ್ಲಿಂದು ಹೇಳಿದ್ದಾರೆ.

ನಕಲಿ ದಾಖಲೆ ಸೃಷ್ಟಿಸಿ ಯೋಜನೆಯ ಲಾಭ ಪಡೆಯುತ್ತಿರುವ ಅನರ್ಹರನ್ನು ಗುರುತಿಸಲು ಕ್ರಮವಹಿಸಲಾಗಿದ್ದು, ಗ್ಯಾರಂಟಿ ಯೋಜನೆ ಮುಂದುವರೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಕೆಲವರು ಮೃತಪಟ್ಟವರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಖಾತೆ ತೆರೆದು ಯೋಜನೆಯ ಲಾಭ ಪಡೆಯುತ್ತಿದ್ದು, ಅರ್ಹರ ದೃಢೀಕರಣಕ್ಕಾಗಿ ಅವರ ಹೆಸರು, ವಿಳಾಸ, ಖಾತೆ ಸಂಖ್ಯೆ ಖಚಿತಪಡಿಸಿಕೊಳ್ಳಲು ಮತ್ತೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದ್ದು, ಯೋಜನೆ ನಿಲ್ಲಿಸುವ ಉದ್ದೇಶವಿಲ್ಲ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದ್ದಾರೆ.

---

ರಾಷ್ಟ್ರೀಯ ವಿದ್ಯಾರ್ಥಿ ಲ್ಯಾಪ್‌ಟಾಪ್ ಯೋಜನೆ-೨೦೨೬ರ ಅಡಿಯಲ್ಲಿ ಉಚಿತ ಲ್ಯಾಪ್‌ಟಾಪ್‌ಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ ಎಂದು ವಾಟ್ಸ್‌ಅಪ್‌ನಲ್ಲಿ ಹರಿದಾಡುತ್ತಿರುವ ಸಂದೇಶ ಸತ್ಯಕ್ಕೆ ದೂರವಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ವಾರ್ತಾ ಶಾಖೆ-ಪಿಐಬಿಯ ಸತ್ಯಶೋಧನಾ ಘಟಕ ಈ ಮಾಹಿತಿ ಸುಳ್ಳು, ಸರ್ಕಾರ ಇಂತಹ ಯಾವುದೇ ಯೋಜನೆಯನ್ನು ಘೋಷಿಸಿಲ್ಲ ಎಂದು ಸ್ಪಷ್ಟಪಡಿಸಿದೆ. ಜನರ ವೈಯಕ್ತಿಕ ಅಥವಾ ಹಣಕಾಸು ಮಾಹಿತಿಯನ್ನು ಸಂಗ್ರಹಿಸಲು ಇಂತಹ ಸಂದೇಶ ಹರಿದಾಡಿರಬಹುದು ಎಂದು ಪಿಐಬಿ ಎಚ್ಚರಿಕೆ ನೀಡಿ, ಅನುಮಾನಾಸ್ಪದ ಲಿಂಕ್‌ಗಳನ್ನು ಕ್ಲಿಕ್ ಮಾಡದಂತೆ ಮನವಿ ಮಾಡಿದೆ.

---

ಭಾರತೀಯ ಧ್ವಜ ಹೊಂದಿದ್ದ ಯಾಂತ್ರೀಕೃತ ಹಡಗು ವಿರಾಟ್-೧ ಒಮಾನ್ ತೀರದಲ್ಲಿ ಎಂಜಿನ್ ಸಮಸ್ಯೆಗೆ ತುತ್ತಾಗಿದ್ದು ೧೧ ಸಿಬ್ಬಂದಿಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ ಎಂದು ಒಮನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯ ತಿಳಿಸಿದೆ. ಯಾಂತ್ರಿಕ ದೋಷದಿಂದಾಗಿ ವಿರಾಟ್-೧ ಹಡಗು ಮುಳುಗಿದ್ದು ಉಳಿದ ಮೂವರು ಸಿಬ್ಬಂದಿಯನ್ನು ರಕ್ಷಿಸುವ ಪ್ರಯತ್ನಗಳು ಮುಂದುವರಿದಿವೆ.

---

ಭಾರತೀಯ ನೌಕಾಪಡೆಯ ಐಎನ್‌ಎಸ್ ಶಾರದಾ ಹಡಗು ಶ್ರೀಲಂಕಾದ ಕೊಲಂಬೊದಲ್ಲಿನ ಪಯಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ವಿವಿಧ ವೃತ್ತಿಪರ, ತರಬೇತಿ ಹಾಗೂ ಕ್ರೀಡಾ ಕಾರ್ಯಕ್ರಮಗಳಿಂದ ಕೂಡಿದ್ದ ಈ ಭೇಟಿಯು ಭಾರತ ಮತ್ತು ಶ್ರೀಲಂಕಾ ನಡುವಿನ ಸಾಗರ ಸಹಕಾರ ಹಾಗೂ ಸ್ನೇಹವನ್ನು ಮತ್ತಷ್ಟು ಬಲಪಡಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಭಾರತ ಮತ್ತು ಶ್ರೀಲಂಕಾ ನಡುವಿನ ದೀರ್ಘಕಾಲೀನ ಸಾಗರ ಸಹಭಾಗಿತ್ವದಡಿ ಮಹಾಸಾಗರ ದೃಷ್ಟಿಕೋನಕ್ಕೆ ಅನುಗುಣವಾಗಿ ಪ್ರಾದೇಶಿಕ ಸಾಗರ ಸಹಕಾರ ಮತ್ತು ಭದ್ರತೆಯ ಮೇಲಿನ ಉಭಯ ರಾಷ್ಟ್ರಗಳ ಬದ್ಧತೆಯನ್ನು ಈ ಭೇಟಿ ಪುನರ್ ದೃಢೀಕರಿಸಿದೆ ಎಂದು ಸಚಿವಾಲಯ ತಿಳಿಸಿದೆ.

---

ಟರ್ಕಿಯಲ್ಲಿ ಇಂದು ನಡೆದ ಬಿಲ್ಲುಗಾರಿಕೆ ವಿಶ್ವಕಪ್ ಹಂತ-೩ರ ಸ್ಪರ್ಧೆಯ ರಿಕರ್ವ್ ಮಿಶ್ರ ತಂಡ ವಿಭಾಗದಲ್ಲಿ ಭಾರತದ ಧೀರಜ್ ಬೊಮ್ಮದೇವರ ಮತ್ತು ಯುವ ಬಿಲ್ಲುಗಾರ್ತಿ ಕುಮ್‌ಕುಮ್ ಮೊಹೋದ್ ಚಿನ್ನದ ಪದಕ ಗೆದ್ದಿದ್ದಾರೆ.  ಫೈನಲ್‌ನಲ್ಲಿ ಭಾರತದ ಜೋಡಿ ೫-೧ ಅಂತರದಿಂದ ದಕ್ಷಿಣ ಕೊರಿಯಾದ ಓ ಯೆ-ಜಿನ್ ಮತ್ತು ಕಿಮ್ ಜೆ-ಡಿಯೋಕ್ ಜೋಡಿಯನ್ನು ಮಣಿಸಿ ಜಯ ಸಾಧಿಸಿತು. ರಿಕರ್ವ್ ಮಿಶ್ರ ತಂಡ ವಿಭಾಗದಲ್ಲಿ ಧೀರಜ್ ಮತ್ತು ಕುಮ್‌ಕುಮ್ ಅವರಿಗೆ ಇದು ಮೊದಲ ವಿಶ್ವಕಪ್ ಚಿನ್ನದ ಪದಕವಾಗಿದೆ.

---

ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆದ ಬಾಂಗ್ಲಾದೇಶ ಮತ್ತು ನೆದರ್‌ಲ್ಯಾಂಡ್ ನಡುವಣ ಐಸಿಸಿ ಟಿ-೨೦ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡ ೭ ವಿಕೆಟ್‌ಗಳ ಗೆಲುವು ಸಾಧಿಸಿದೆ. ಟಾಸ್ ಗೆದ್ದು, ಮೊದಲು ಬ್ಯಾಟ್ ಮಾಡಿದ ನೆದರ್‌ಲ್ಯಾಂಡ್ ತಂಡ ೨೦ ಓವರ್‌ಗಳಲ್ಲಿ ೮ ವಿಕೆಟ್ ನಷ್ಟಕ್ಕೆ ೧೩೯ ರನ್ ಗಳಿಸಿತು. ಗುರಿ ಬೆನ್ನತ್ತಿದ ಬಾಂಗ್ಲಾದೇಶ ಇನ್ನು ೫ ಎಸೆತ ಬಾಕಿ ಇರುವಂತೆಯೇ ಜಯ ಸಾಧಿಸಿದೆ.

'ಎ' ಗುಂಪಿನಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವೆ ಪಂದ್ಯ ಪ್ರಗತಿಯಲ್ಲಿದೆ. ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.

__________ ಮುಕ್ತಾಯ ___________